ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

<u>ಸಿ.ಸಿ. ಸಂಖ್ಯೆ: **493/2022**</u>

ಚಾಸಾಃ 3 ಪ್ರಾಸಾಃ3

| | | |
|---|---|---|
| ಹೆಸರು | : | ರಾಜಣ್ಣ |
| ಗಂಡನ/ತಂದೆಯ ಹೆಸರು | : | ದೊಡ್ಡ ಲಿಂಗಯ್ಯ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ನಾಗವಾರ ಗ್ರಾಮ. |

<u>ದಿನಾಂಕ **01.07.2025** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>

ಚಾಸಾ-***1*** ಮತ್ತು ಆರೋಪಿತರು ಗೊತ್ತು. ಚಾಸಾ-***2*** ರವರು ಗೊತ್ತು. ದಿಃ***03.04.2022*** ರಂದು ಸಮಯ ಸಂಜೆ ***4.00*** ಗಂಟೆಯ ಸಮಯದಲ್ಲಿ ಚಾಸಾ***2*** ರವರು ನನಗೆ ದೂರವಾಣಿ ಕರೆ ಮಾಡಿ ಆರೋಪಿತರು ದೊಣ್ಣೆಯಿಂದ ಚಾಸಾ***1*** ರವರಿಗೆ ಹಲ್ಲೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ನಾನು ಗದ್ದೆಯ ಬಳಿ ಹೋಗಿ ಚಾಸಾ***1*** ರವರನ್ನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಚಾಸಾ-***2*** ರವರನ್ನು ಘಟನೆಯ ಬಗ್ಗೆ ವಿಚಾರ ಮಾಡಿರುತ್ತೇನೆ. ಆಗ ಚಾಸಾ***2*** ರವರು ಆರೋಪಿತರು ಚಾಸಾ***1*** ರವರಿಗೆ ಕೊಡಬೇಕಾಗಿದ್ದ ಹಣವನ್ನು ಚಾಸಾ***1*** ರವರು ಕೇಳಿದ ವಿಚಾರದಲ್ಲಿ ಆರೋಪಿತರು ಚಾಸಾ***1*** ರವರ ಮೇಲೆ ಹಲ್ಲೆ ನಡೆಸಿ, ನಿನ್ನನ್ನು ಮುಗಿಸುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತಾರೆಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ವಿ ಜಿ ವಕೀಲರಿಂದಃ</u>

ಆರೋಪಿತರು ಮತ್ತು ಚಾಸಾ1 ರವರ ನಡುವೆ ಆದ ಹಣಕಾಸಿನ ವಿಚಾರ ಗೊತ್ತಿದೆ. ಆ ಸಮಯದಲ್ಲಿ ಅಂದರೆ ಹಣದ ವ್ಯವಹಾರದಲ್ಲಿ ನಾನು ಅಲ್ಲಿ ಪ್ರತ್ಯಕ್ಷವಾಗಿ

ಇರಲಿಲ್ಲ. ಚಾಸಾ1 ರವರು ನನ್ನ ಚಿಕ್ಕಪ್ಪನ ಮಗ. ಚಾಸಾ1 ರವರು ನನ್ನ ಚಿಕ್ಕಪ್ಪನ ಮಗನಾಗಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.